*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 12-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ –

3. ಹಾದಿಹಳ್ಳಿಯಿಂದ ಕಬ್ಬಿನಹಳ್ಳಿಗೆ 20 ಕಿ.ಮೀ ದೂರವಾಗುತ್ತದೆ. ನಿಮ್ಮ ಮನೆ, ಜಮೀನು ಮತ್ತು ನಿಮ್ಮ ಕೆಲಸ ಎಲ್ಲಾ ಹಾದಿಹಳ್ಳಿಯಲ್ಲಿಯೇ ಇರುವುದು ಎಂದರೆ ಸರಿ. ಪೊಲೀಸರು ನಿಮಗೆ ನೋಟೀಸನ್ನು ಎಲ್ಲಿ ಜಾರಿ ಮಾಡಿದ್ದರು ಎಂದರೆ ಸಾಕ್ಷಿ ಕೊಲೆಯಾದ ಜಾಗದಲ್ಲಿ ಎನ್ನುತ್ತಾರೆ. ನೀವು ಸದರಿ ಸ್ಥಳಕ್ಕೆ ಎಷ್ಟು ಗಂಟೆಗೆ ಹೋಗಿದ್ದೀರಿ ಎಂದರೆ ಸಾಕ್ಷಿ ಬೆಳಿಗ್ಗೆ 9 ಗಂಟೆಗೆ ಎನ್ನುತ್ತಾರೆ. ನಾನು ಅಲ್ಲಿಗೆ ಹೋಗುವ ಪೂರ್ವದಲ್ಲಿಯೇ ಪೊಲೀಸರು ಅಲ್ಲಿಗೆ ಬಂದಿದ್ದರು. ಆದರೆ ಅವರು ಅಲಿಲಗೆ ಬಂದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ.

4. ಪೊಲೀಸರು ನೋಟೀಸನ್ನು ಕೊಟ್ಟರು ಎಂದು ಹೇಳಿದ್ದೀರಿ ಅದರಲ್ಲಿ ಏನು ಬರೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಎಷ್ಟು ಗಂಟೆಗೆ ಮಹಜರನ್ನು ಬರೆಯಲು ಪ್ರಾರಂಭಿಸಲಾಯಿತು ಎಂದರೆ ಸಾಕ್ಷಿ ಬೆಳಿಗ್ಗೆ 9 ಗಂಟೆಯಿಂದ ಎನ್ನುತ್ತಾರೆ. ನೀವು

ಸ್ಥಳದಲ್ಲಿ ಯಾರದಾದ್ದರೂ ಫೋಟೋ ಅಥವಾ ಗುರುತಿನ ಚೀಟಿಯನ್ನು ನೊಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

5. ಕೊಲೆಯಾಗಿತ್ತು ಎಂದು ಹೇಳಲಾದ ಮನೆ ರಮೇಶಗೌಡರವರ ತೋಟದೊಳಗೆ ಇರುವ ಕೂಲಿ ಲೈನ್ ಮನೆ ಎಂದರೆ ಸರಿ. ಸದರಿ ಮನೆಯಲ್ಲಿ ಯಾವುದೇ ವ್ಯಕ್ತಿಯ ಗುರುತಿಗೆ ಸಂಬಂಧಿಸಿದ ಫೋಟೋ, ಐಡಿ. ಅಥವಾ ವಸ್ತುಗಳು ಕಂಡುಬಂತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ರಮೇಶಗೌಡರವರ ಎಸ್ಟೇಟಿನ ಕೂಲಿ ಲೈನಿನಲ್ಲಿ ಯಾರೆಲ್ಲಾ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಮಗೆ ಸದರಿ ಕೂಲಿ ಲೈನಿಗೆ ಹೋಗುವಂತಹ ಯಾವುದೇ ವ್ಯವಹಾರ ಇಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

6. ನೀವು ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೀವು ಈ ಹಿಂದೆ ನೋಡಿರಲಿಲ್ಲ ಮೊದಲ ಬಾರಿಗೆ ನೀವು ಕಳೆದ ಬಾರಿ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದ ಸಮಯದಲ್ಲಿ ನೋಡಿದ್ದೀರಿ ಎಂದರೆ ಸರಿ. ನಿಪಿ.2 ದಾಖಲೆಯಲ್ಲಿ ಕೂಲಿ ಲೈನಿನ ಬಗ್ಗೆ ಏನು ವಿವರಗಳನ್ನು ಬರೆಯಲಾಗಿದೆ ಎಂದು ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ನೀವು ಹೇಳಿದ ವಸ್ತುಗಳನ್ನು ಸಂಗ್ರಹಿಸಿದ್ದನ್ನು ಹೊರತುಪಡಿಸಿ ಸ್ಥಳಕ್ಕೆ ಬೇರೆ ಯಾವುದಾದರೂ ತನಿಖಾ ತಂಡದವರು ಬಂದಿದ್ದರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಕೊಲೆ ಯಾವ ರೀತಿ ನಡೆಯಿತು ಎಂದು ಹೇಳುವ ಯಾವುದಾದರೂ ವ್ಯಕ್ತಿ ಸ್ಥಳದಲ್ಲಿ ಇದ್ದರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

7. ಕೊಲೆಯಾಗಿತ್ತು ಎಂದು ಹೇಳಲಾದ ಮನೆಯ ಅಕ್ಕಪಕ್ಕದಲ್ಲಿ

ಬೇರೆ ವಾಸದ ಮನೆಗಳು ಇದ್ದವೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ರಮೇಶಗೌಡರವರ ತೋಟದಲ್ಲಿ ಅವರ ಮನೆಯ ಹಿಂಭಾಗದಲ್ಲಿಯೇ ಅವರಿಗೆ ಸೇರಿದ ಕೂಲಿಲೈನ್ ಮನೆಗಳು ಇವೆ. ಬೆರಳಚ್ಚು ಮತ್ತು ಶ್ವಾನ ದಳದವರು ಸ್ಥಳಕ್ಕೆ ಬಂದು ಪರಿಶೀಲಿಸಿದ ಬಗ್ಗೆ ಮಹಜರಿನಲ್ಲಿ ಬರೆಯಲಾಗಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮಹಜರಿನಲ್ಲಿ ಆರೋಪಿಯ ಬಗ್ಗೆ ಏನಾನ್ನಾದರೂ ಬರೆಯಲಾಗಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ನಿಮ್ಮ ಸಹಿಯನ್ನು ಪಡೆದುಕೊಂಡಿದ್ದನ್ನು ಹೊರತುಪಡಿಸಿ ನೀವು ಸಹಿ ಮಾಡಿದ ದಾಖಲೆಯಲ್ಲಿ ಬರೆದಿರುವ ವಿವರಗಳನ್ನು ನಿಮಗೆ ಹೇಳಲಾಗುವುದಿಲ್ಲ ಎಂದರೆ ಸರಿ.

8. ನೀವು ಒಟ್ಟು ಎಷ್ಟು ಸಹಿಗಳನ್ನು ಮಾಡಿದ್ದೀರಿ ಎಂದರೆ ಸಾಕ್ಷಿ ಅಂದಾಜು 15 ರಿಂದ 16 ಸಹಿಗಳನ್ನು ಮಾಡಿರಬಹುದು ಎನ್ನುತ್ತಾರೆ. ಸಹಿ ಮಾಡಿ ಈಗ್ಗೆ ತುಂಬಾ ಸಮಯ ಆಗಿದ್ದರಿಂದ ನಾನು ಸಹಿ ಮಾಡಿದ ಚೀಟಿಗಳಲ್ಲಿ ಏನು ಬರೆದಿತ್ತು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ನಿಮ್ಮ ತಾಯಿ ಕಬ್ಬಿನಹಳ್ಳಿ ಗ್ರಾಮದವರೇ ಎಂದರೆ ಸರಿ. ಆ ಕಾರಣಕ್ಕೆ ನೀವು ರಮೇಶಗೌಡರವರ ಕೋರಿಕೆಯ ಮೇರೆಗೆ ಸ್ಥಳಕ್ಕೆ ಹೋಗಿದ್ದೀರಿ ಮತ್ತು ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಪೊಲೀಸರು ನಿಪಿ.11 ರಂತೆ ನಿಮಗೆ ಯಾವುದೇ ನೋಟೀಸನ್ನು ಜಾರಿ ಮಾಡಿ ಕರೆದಿರಲಿಲ್ಲ, ನೀವು ಚಾಸಾ.15 ರವರ ಎಸ್ಟೇಟಿಗೆ ಹೋಗಿರಲಿಲ್ಲ, ಅಲ್ಲಿ ಪೊಲೀಸರು ನಿಮ್ಮ ಸಮಕ್ಷಮ ನಿಪಿ.2 ರಂತೆ

ಯಾವುದೇ ಪಂಚನಾಮೆ ಜರುಗಿಸಿಲ್ಲ, ಮು.ಮಾ.1 ರಿಂದ 7 ನ್ನು ಅಮಾನತು ಪಡಿಸಿಕೊಂಡಿಲ್ಲ ಮತ್ತು ನಿಪಿ.3 ರಿಂದ ಪಿ.5 ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ